ಜವಾಬ್ದಾರಿಯನ್ನು ಹೊತ್ತುಕೊಂಡಿದ್ದಳು. ಅಡಿಗೆ ಮನೆಯ ಕೆಲಸ ಮುಗಿಸಿ ತಲೆಗೊಂದು ಕೆಂಪು ಮುಂಡಾಸು ಸುತ್ತಿ ಸೀರೆಯನ್ನು ಕಾಲ್ಗಂಟಿನವರೆಗೆ ಎತ್ತಿಕಟ್ಟಿ 'ವ್ಹಾಯ್' ಎನ್ನುತ್ತ ಕೈಯ್ಯಲ್ಲೊಂದು ಕುಡಗೋಲು ಹಿಡಿದು ಹೊರಟಳೆಂದರೆ ಕಾಫಿತೋಟ, ಅಡಿಕೆ ತೋಟ ಹೀಗೆ ಆ ಮನೆಗೆ ಸಂಬಂಧಿಸಿದ ಎಲ್ಲದರ ಮೇಲುಸ್ತುವಾರಿಯನ್ನೂ ತಂದು ಆ ಮನೆಯ ಯಜಮಾನನಿಗೆ ಒಪ್ಪಿಸುತ್ತಿದ್ದಳು. ಎಲ್ಲಿ ಜೀರಿಗೆ ಮೆಣಸು ಬಿಟ್ಟಿದೆ. ಎಲ್ಲಿ ಏಲಕ್ಕಿ ಚಿಗುರಿದೆ, ಎಲೆ ಬಳ್ಳಿಗೆ ಯಾವ ಹುಳುವಿನ ಕಾಟ. ಹೀಗೆ ಆಕೆಗೆ ಗೊತ್ತಿಲ್ಲದ ಯಾವ ಸಂಗತಿಯೂ ಇರಲಿಲ್ಲ. ಅವಳ ಈ ರೀತಿಯ ಕಟ್ಟುನಿಟ್ಟಿನ ಕಣ್ಣಳತೆಯಿಂದಾಗಿ ಆಳು ಮಕ್ಕಳಿಗಂತೂ ಈಕೆಯನ್ನು ಕಂಡರೆ ಚೊಣ್ಣದಲ್ಲಿಯೇ ನೀರು ಜಿನುಗುತ್ತಿತ್ತು. ಅವರು ಒಂದೊಪ್ಪುತ್ತು ಸುಮ್ಮನೆ ಕೂತು ಬೀಡಿ ಸೇದಲು ಸಹ ಹೆದರಿ ಬೀಳುತ್ತಿದ್ದರು. ಶಾರದೆಯ ಅಜ್ಜ ಮತ್ತು ಮಾವಂದಿರಿಗಿಂತಲೂ ಹೆದರಿಯೋ, ಪ್ರೀತಿಯೊಂದಲೂ ಭಾಗೀರಥಿಗೆ ಒಂದಿಷ್ಟು ಜಾಸ್ತಿ ಗೌರವವನ್ನು ನೀಡುತ್ತಿದ್ದರು.

ಇಷ್ಟೆಲ್ಲ ಆದರೂ ಒಮ್ಮೊಮ್ಮೆ ಭಾಗೀರಥಿ ಈ ಮನೆಗೆ ಯಾಕಾದರೂ ಬಂದು ಸೇರಿದಳೋ ಎಂಬಂತಾಗುತ್ತಿತ್ತು. ಅದಕ್ಕೆ ಕಾರಣ ಅವಳ ಪುರುಸೊತ್ತಿಲ್ಲದ ಬಾಯಿ. ಆ ಬಾಯಿಯಲ್ಲಿ ಬಾರದೇ ಹೋಗುವವರ ಸಂಖ್ಯೆಯೇ ಬಹಳ ಕಡಿಮೆ ಇದ್ದಿತು. ಯಾರೊಂದಿಗೂ ಆಕೆ ಸೌಜನ್ಯದಿಂದ ಮಾತನಾಡಿದ್ದನ್ನು ಆ ಹೊಸಕೊಪ್ಪ ಊರ ಜನತೆ ಕಂಡೇ ಇರಲಿಲ್ಲ. ಅದರಲ್ಲೂ ಗಂಡಸರೆಂದರೆ ಉರಿದುರಿದು ಬೀಳುತ್ತಿದ್ದಳು. ಶಾರದೆಯ ಅಜ್ಜನೊಬ್ಬರನ್ನು ಬಿಟ್ಟರೆ ಯಾರೊಬ್ಬರಿಗೂ ಹೆದರುವ ಆಸಾಮಿಯಾಗಿರಲಿಲ್ಲ. ನಯ ಎನ್ನುವುದು ಆಕೆಗೆ ಗೊತ್ತೇ ಇರಲಿಲ್ಲವೋ ಏನೋ. ಯಾರಾದರೂ 'ಹುಷಾರಿದ್ಯೇನೆ ಭಾಗೀ' ಎಂದು ಕೇಳಿದರೂ ಸಾಕು 'ನಿಮ್ ಕಣ್ಣು ಹೊಟ್ಟಿ ಹೋಗ, ಹುಷಾರಿಲ್ದೆ ನಂಗೇನಾಗಿದೆ' ಎಂದು ಬಿಡುತ್ತಿದ್ದಳು. 'ಊಟ ಆಯ್ತೇನೆ' ಎಂದು ಕೇಳಿದರೆ. 'ಯಾಕೆ ಉಣ್ಣಬಾರದಿತ್ತ' ಎನ್ನುತ್ತಿದ್ದಳು. ಹೀಗೆ ಏನಾದರೊಂದು ಕೇಳಿದರೆ ತಾನು ಏನಾದರೊಂದು ಹೇಳಿ, ಪ್ರಶ್ನೆ ಕೇಳಿದವರಿಗೆ ತಾವು ಯಾಕಾದರೂ ಇವಳನ್ನು ಮಾತಾಡಿಸಿದೆವೋ ಎನ್ನುವ ಪೇಚಾಟಕ್ಕಿಳಿಸಿ ಬಿಡುತ್ತಿದ್ದಳು. ಹೀಗೆ ಬೆಳಿಗ್ಗೆ ಎಲ್ಲ ಅವಳ ಹಾರಾಟಗಳು ಊರ ಬಸವನಂತೆ ತಿರುಗುತ್ತಿದ್ದರೂ ಸಂಜೆ ಆದೊಡನೆ ಮಂಕಾಗಿಬಿಡುತ್ತಿದ್ದಳು. ಒಬ್ಬಳೇ ಕೂತು ಬಿಕ್ಕುತ್ತಿದ್ದಳು. ಯಾರೆಷ್ಟೇ ಕೇಳಿದರೂ ಏನೊಂದು ಹೇಳುತ್ತಿರಲಿಲ್ಲ. ಆದರೆ ಕಾಲ ಕಳೆದಂತೆ ಅವಳ ಹನ್ನೊಂದು ವರ್ಷದ ಮಗು ಮೈ ತುಂಬಾ ನಳಿಕೆ ಸಿಕ್ಕಿಸಿಕೊಂಡು ತಿಂಗಳುಗಟ್ಟಲೆ ಆಸ್ಪತ್ರೆಯಲ್ಲಿ ಒದ್ದಾಡಿ ಆಮೇಲೆ ತನ್ನ ಕೈ ತಪ್ಪಿ ಹೋದ ಸಂಕಟದ ಕತೆಯನ್ನು ಹೇಳಿ ಎದೆಬಿರಿಯೆ ಅತ್ತಿದ್ದಳು. ಅದೇ ಸಮಯಕ್ಕೆ ಅವಳ ಗಂಡನೂ ಹಗ್ಗ ಜೋಡಿಸಿಕೊಂಡಿದ್ದನ್ನು ಹೇಳಿ ನಿರ್ಲಿಪ್ತಳಾಗಿದ್ದಳು. ಹೀಗೆ ಎರಡೆರಡು ಜೀವಗಳನ್ನು ಒಟ್ಟೊಟ್ಟಿಗೆ ಕಳೆದುಕೊಂಡ ದುಃಖ ಅವಳಲ್ಲಿ ನವಿರು ಭಾವವನ್ನು ಹೊಸಕಿ ಹಾಕಿರಬಹುದು ಎಂದುಕೊಂಡು ಪ್ರತಿಯೊಬ್ಬರೂ ಅವಳ ಕುರಿತಾಗಿ ಕನಿಕರ ತಾಳುತ್ತಿದ್ದರು. ಅಂತೆಯೇ ಆಕೆ ಏನು ಮಾತನಾಡಿದರೂ ಸುಮ್ಮನಿರುತ್ತಿದ್ದರು.

ಒಮ್ಮೆ ಹೀಗೆಯೇ ಆಯಿತು–ಆ ಊರಿಗೆ ಬಂದ ಹಿರಿಯ ಸ್ವಾಮಿಯೊಬ್ಬರು ಶಾರದೆಯ ಅಜ್ಜನ ಮನೆಯಲ್ಲಿ ವಾಸ್ತವ್ಯ ಹೂಡಿದರು. ಅದು ಒಂದು ದಿನವಾಗಿದ್ದರೆ ಏನೂ ಪ್ರಮಾದವಾಗುತ್ತಿರಲಿಲ್ಲವೋ ಏನೋ. ಅವರು ಉಳಿದುಕೊಂಡಿದ್ದು ವಾರಗಟ್ಟಲೆಯಾದ್ದರಿಂದ ಪ್ರತ್ಯೇಕ ಶೌಚಾಲಯಗಳು, ಬಚ್ಚಲಮನೆಗಳು ನಿರ್ಮಾಣವಾದವು. ಇಷ್ಟೇ ಆಗಿದ್ದರೂ ಅಡ್ಡಿ ಇರಲಿಲ್ಲ. ಆ ಎರಡೂ ಕಟ್ಟಡಗಳು ವಾಸ್ತುವಿನ ಕಾರಣದಿಂದಾಗಿ ಕೊಟ್ಟಿಗೆಗಿಂತ ತುಸು